# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1338 |
| 2 | ಸದಸ್ಯರ ಹೆಸರು | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ವಿಷಯ | ರೇಷ್ಮೆ ಇಲಾಖೆಯ ವಿವಿಧ ಹುದ್ದೆ ಮತ್ತು ಮುಂಬಡ್ತಿ ಬಗ್ಗೆ |
| 4 | ಉತ್ತರಿಸುವ ದಿನಾಂಕ | 19.03.2025 |
| 5 | ಉತ್ತರಿಸುವವರು | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |
| | **ಪ್ರಶ್ನೆಗಳು** | **ಉತ್ತರಗಳು** |
| ಅ) | ಕಳೆದ ಐದು ವರ್ಷಗಳಲ್ಲಿ ರೇಷ್ಮೆ ಇಲಾಖೆಯಲ್ಲಿ ಆಡಳಿತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಷ್ಟು ಹುದ್ದೆಗಳಿಗೆ ಮುಂಬಡ್ತಿಯನ್ನು ನೀಡಲಾಗಿದೆ: (ಹುದ್ದೆವಾರು ವಿವರ ನೀಡುವುದು) | ಕಳೆದ ಐದು ವರ್ಷಗಳಲ್ಲಿ ರೇಷ್ಮೆ ಇಲಾಖೆಯಲ್ಲಿ ಆಡಳಿತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ **234** ಹುದ್ದೆಗಳಿಗೆ ಮುಂಬಡ್ತಿಯನ್ನು ನೀಡಲಾಗಿರುತ್ತದೆ.<br><br>ಮುಂಬಡ್ತಿ ನೀಡಿರುವ ಹುದ್ದೆವಾರು ವಿವರದ ಪಟ್ಟಿ **ಅನುಬಂಧದಲ್ಲಿ** ಲಗತ್ತಿಸಿದೆ. |
| ಆ) | ಬೆಂಗಳೂರು ನಗರ ವ್ಯಾಪ್ತಿಯಲ್ಲಿ ರೇಷ್ಮೆ ಇಲಾಖೆಗೆ ಮಂಜೂರಾದ ಹುದ್ದೆಗಳೆಷ್ಟು: ಅವುಗಳಲ್ಲಿ ತಾಂತ್ರಿಕ ಹುದ್ದೆಗಳು ಹಾಗೂ ಆಡಳಿತ ಹುದ್ದೆಗಳ ಸಂಖ್ಯೆ ಎಷ್ಟು: ಖಾಲಿ ಇರುವ ಹುದ್ದೆಗಳೆಷ್ಟು: ಒಬ್ಬರೇ ಅಧಿಕಾರಿ ಎರಡೆರಡು ಕಡೆ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: (ವಿವರ ನೀಡುವುದು) | ಬೆಂಗಳೂರು ನಗರ ವ್ಯಾಪ್ತಿಯಲ್ಲಿ ರೇಷ್ಮೆ ಇಲಾಖೆಗೆ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ **420**. ಇವುಗಳಲ್ಲಿ ತಾಂತ್ರಿಕ ಹುದ್ದೆಗಳು **159** ಹಾಗೂ ಆಡಳಿತ ಹುದ್ದೆಗಳು **241** ಮತ್ತು ಇತರೆ ಹುದ್ದೆಗಳ ಸಂಖ್ಯೆ **20**.<br><br>ರೇಷ್ಮೆ ಇಲಾಖೆಯಲ್ಲಿ ಒಟ್ಟು 03 ಹುದ್ದೆಗಳಲ್ಲಿ ಎರಡೆರಡು ಕಡೆ ಒಬ್ಬರೇ ಅಧಿಕಾರಿ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಕಾರ್ಯಪಾಲಕ ಅಭಿಯಂತರರ **ಒಂದು** ಹುದ್ದೆ ಖಾಲಿ ಇದ್ದು, ರೇಷ್ಮೆ ಭವನ, ಬೆಂಗಳೂರು ಇಲ್ಲಿನ ಕಾಮಗಾರಿ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರು ಸದರಿ ಹುದ್ದೆಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ರೇಷ್ಮೆ ನಿರ್ದೇಶನಾಲಯದಲ್ಲಿ ಖಾಲಿ ಇರುವ ಲೆಕ್ಕಾಧಿಕಾರಿಯ **ಎರಡು** ಹುದ್ದೆಗಳಲ್ಲಿ ನಿರ್ದೇಶನಾಲಯದ ಆಡಳಿತಾಧಿಕಾರಿ ಮತ್ತು ಓರ್ವ ಪತ್ರಾಂಕಿತ ವ್ಯವಸ್ಥಾಪಕರು-1 ರವರು ಹೆಚ್ಚುವರಿ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. |
| ಇ) | ಐದು ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ಬೆಂಗಳೂರಿನಲ್ಲೇ ಇರುವ ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ ಎಷ್ಟು: ವರ್ಗಾವಣೆ ನಿಯಮದಂತೆ ಇವರ ವರ್ಗಾವಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಪ್ರಸ್ತುತ ಐದು ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ಬೆಂಗಳೂರಿನಲ್ಲೇ ಇರುವ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳ ಒಟ್ಟು ಸಂಖ್ಯೆ **41**. ಇದರಲ್ಲಿ ಗ್ರೂಪ್ ಬಿ-1, ಗ್ರೂಪ್ ಸಿ-21, ಗ್ರೂಪ್ ಡಿ-19 ಮಂದಿ ಅಧಿಕಾರಿ/ಸಿಬ್ಬಂದಿಗಳಿರುತ್ತಾರೆ.<br><br>ಇವರುಗಳ ವರ್ಗಾವಣೆಗೆ ಯಾವುದೇ ಕ್ರಮ ವಾಗಿರುವುದಿಲ್ಲ. |

| | | |
|---|---|---|
| ಈ) | ರೇಷ್ಮೆ ಇಲಾಖೆಯ ತಾಂತ್ರಿಕ ಇಲಾಖೆಯಾಗಿದ್ದು, ಇಲಾಖೆಯ ವಿಸ್ತರಣಾ ಚಟುವಟಿಕೆಗಳಿಗೆ ಆದ್ಯತೆ ನೀಡದೇ ಆಡಳಿತಾತ್ಮಕ ಸಿಬ್ಬಂದಿಗಳಿಗೆ ಅನಗತ್ಯವಾಗಿ ಮುಂಬಡ್ತಿ ನೀಡಿ ಇಲಾಖಾ ವಿಸ್ತರಣಾ ಚಟುವಟಿಕೆಗಳು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು) | ರೇಷ್ಮೆ ಇಲಾಖೆಯಲ್ಲಿ ತಾಂತ್ರಿಕ ಹುದ್ದೆಗಳಲ್ಲಿ ಕೇವಲ 688 ಹುದ್ದೆಗಳು ಮಾತ್ರ ಭರ್ತಿಯಾಗಿದ್ದು, ವಿಸ್ತರಣಾ ಚಟುವಟಿಕೆಗಳಿಗೆ ತಾಂತ್ರಿಕ ಸಿಬ್ಬಂದಿಗಳ ಕೊರತೆಯಿಂದ ತೊಂದರೆಯಾಗುತ್ತಿದೆಯೇ ವಿನಃ ಆಡಳಿತಾತ್ಮಕ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಿರುವುದರಿಂದ ಇಲಾಖೆಯ ವಿಸ್ತರಣಾ ಚಟುವಟಿಕೆಗಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗಿರುವುದಿಲ್ಲ ಮತ್ತು ಪ್ರಗತಿ ಕುಂಠಿತವಾಗಿರುವುದಿಲ್ಲ.<br><br>ಇಲಾಖೆಯಲ್ಲಿ ಬಹುತೇಕ ಹುದ್ದೆಗಳು ಖಾಲಿ ಇದ್ದರೂ ಸಹ ಇಲಾಖೆಯ ಅಭಿವೃದ್ಧಿ ಕಾರ್ಯಗಳಿಗೆ ಮತ್ತು ದೈನಂದಿನ ಆಡಳಿತ ನಿರ್ವಹಣೆಗೆ ತೊಂದರೆಯಾಗದಂತೆ ಹಾಲಿ ಲಭ್ಯವಿರುವ ಸಿಬ್ಬಂದಿಗಳ ಸೇವೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು (ಅಧಿಕಾರಿ/ಸಿಬ್ಬಂದಿಗಳನ್ನು ಹೆಚ್ಚುವರಿ ಪ್ರಭಾರದಲ್ಲಿರಿಸುವ ಮೂಲಕ) ಇಲಾಖಾ ಯೋಜನೆಗಳನ್ನು ಹಾಗೂ ಕಾರ್ಯ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.<br><br>ಇಲಾಖೆಯಲ್ಲಿ ಮುಂಬಡ್ತಿಗೆ ಲಭ್ಯವಿರುವ ಆಡಳಿತಾತ್ಮಕ ಮತ್ತು ತಾಂತ್ರಿಕ ಹುದ್ದೆಗಳೂ ಸೇರಿದಂತೆ ನಿಯಮಗಳ ರೀತ್ಯಾ ಎಲ್ಲಾ ವೃಂದದ ಅಧಿಕಾರಿ/ಸಿಬ್ಬಂದಿಗಳಿಗೂ ಮುಂಬಡ್ತಿ ನೀಡಲಾಗಿರುತ್ತದೆ. **ಅನುಬಂಧದಲ್ಲಿ** ಮಾಹಿತಿಯನ್ನು ಲಗತ್ತಿಸಿದೆ. |

ಸಂಖ್ಯೆ: ರೇಷ್ಮೆ 40 ರೇಕೃವಿ 2025

(ಕೆ. ವೆಂಕಟೇಶ್)
ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ /(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:1338 (ಅ) & (ಈ)ಕ್ಕೆ ಅನುಬಂಧ

**ರೇಷ್ಮೆ ಇಲಾಖೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಆಡಳಿತ ಹುದ್ದೆಗಳಿಗೆ ಮುಂಬಡ್ತಿ ನೀಡಿರುವ ಕುರಿತು ವಿವರ**

| ಕ್ರ. ಸಂ | ಹುದ್ದೆ | 2020 | 2021 | 2022 | 2023 | 2024 | ಕಳೆದ ಐದು ವರ್ಷಗಳಲ್ಲಿ ಮುಂಬಡ್ತಿ ನೀಡಿದ ಒಟ್ಟು ಸಂಖ್ಯೆ |
|---|---|---|---|---|---|---|---|
| 1 | ಆಡಳಿತಾಧಿಕಾರಿ | - | - | - | - | 1 | 1 |
| 2 | ಪತ್ರಾಂಕಿತ ವ್ಯವಸ್ಥಾಪಕರು-1 | - | 4 | 3 | - | 3 | 10 |
| 3 | ಪತ್ರಾಂಕಿತ ವ್ಯವಸ್ಥಾಪಕರು-2 | 1 | 16 | - | - | 27 | 44 |
| 4 | ಅಧೀಕ್ಷಕರು | 4 | 26 | 4 | - | 37 | 71 |
| 5 | ಪ್ರಥಮ ದರ್ಜೆ ಸಹಾಯಕರು | - | 9 | 2 | - | 33 | 44 |
| 6 | ಶೀಘ್ರಲಿಪಿಗಾರರು | - | - | 4 | - | 2 | 6 |
| 7 | ದ್ವಿತೀಯ ದರ್ಜೆ ಸಹಾಯಕರು | - | 4 | 8 | - | 13 | 25 |
| 8 | ಬೆರಳಚ್ಚುಗಾರರು (ಹಿರಿಯ) | - | 2 | 2 | - | 1 | 5 |
| 9 | ವಾಹನ ಚಾಲಕರು | - | 1 | 1 | - | 2 | 4 |
| 10 | ಅನುಚರರು | - | 2 | 17 | - | 5 | 24 |
| **ಒಟ್ಟಾರೆ** | | **5** | **64** | **41** | | **124** | **234** |

**ರೇಷ್ಮೆ ಇಲಾಖೆಯಲ್ಲಿ ಕಳೆದ ಐದು ವರ್ಷಗಳಲ್ಲಿ ತಾಂತ್ರಿಕ ಹುದ್ದೆಗಳಿಗೆ ಮುಂಬಡ್ತಿ ನೀಡಿರುವ ಕುರಿತು ವಿವರ**

| ಕ್ರ. ಸಂ | ಹುದ್ದೆ | 2020 | 2021 | 2022 | 2023 | 2024 | ಕಳೆದ ಐದು ವರ್ಷಗಳಲ್ಲಿ ಮುಂಬಡ್ತಿ ನೀಡಿದ ಒಟ್ಟು ಸಂಖ್ಯೆ |
|---|---|---|---|---|---|---|---|
| 1 | ರೇಷ್ಮೆ ಅಪರ ನಿರ್ದೇಶಕರು(ತಾಂತ್ರಿಕ) | - | - | - | 1 | 1 | **2** |
| 2 | ರೇಷ್ಮೆ ಜಂಟಿ ನಿರ್ದೇಶಕರು | - | 8 | - | 2 | 8 | **18** |
| 3 | ರೇಷ್ಮೆ ಉಪ ನಿರ್ದೇಶಕರು | - | 20 | - | 5 | 25 | **50** |
| 4 | ರೇಷ್ಮೆ ಸಹಾಯಕ ನಿರ್ದೇಶಕರು | 23 | 42 | - | - | 6 | **71** |
| 5 | ರೇಷ್ಮೆ ವಿಸ್ತರಣಾಧಿಕಾರಿಗಳು | 6 | 95 | 28 | - | 118 | **247** |
| 6 | ರೇಷ್ಮೆ ನಿರೀಕ್ಷಕರು | - | 114 | 94 | 1 | 83 | **292** |
| 7 | ರೇಷ್ಮೆ ಪ್ರದರ್ಶಕರು | - | 30 | 11 | - | 13 | **54** |
| **ಒಟ್ಟಾರೆ.** | | **29** | **309** | **133** | **9** | **254** | **734** |

**ರೇಷ್ಮೆ ಇಲಾಖೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಇತರೆ ಹುದ್ದೆಗಳಿಗೆ ಮುಂಬಡ್ತಿ ನೀಡಿರುವ ಕುರಿತು ವಿವರ**

| ಕ್ರ. ಸಂ | ಹುದ್ದೆ | 2020 | 2021 | 2022 | 2023 | 2024 | ಕಳೆದ ಐದು ವರ್ಷಗಳಲ್ಲಿ ಮುಂಬಡ್ತಿ ನೀಡಿದ ಒಟ್ಟು ಸಂಖ್ಯೆ |
|---|---|---|---|---|---|---|---|
| 1 | ಕಾರ್ಯಪಾಲಕ ಅಭಿಯಂತರರು | - | - | 1 | - | 1 | **2** |
| 2 | ಸಹಾಯಕ ಕಾ.ಪಾ.ಅಭಿಯಂತರರು | - | - | - | 1 | - | **1** |
| 3 | ಕಿರಿಯ ಅಭಿಯಂತರರು (ವಿ.ದ) | - | 1 | - | - | - | **1** |
| **ಒಟ್ಟಾರೆ.** | | | **1** | **1** | **1** | **1** | **4** |

**ಮೇಲ್ಕಂಡಂತೆ ರೇಷ್ಮೆ ಇಲಾಖೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಎಲ್ಲಾ ವೃಂದದಲ್ಲಿ ಮುಂಬಡ್ತಿ ನೀಡಿರುವ ಒಟ್ಟು ಹುದ್ದೆಗಳ ಸಂಖ್ಯೆ 972 ಆಗಿರುತ್ತದೆ.**